ಇವತ್ತು ಪರ್‌ಸೆಂಟ್ ಆ ಭಾಗಕ್ಕೆ ಕೊಟ್ಟರೆ ಅತ್ಯಂತ ಅವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳಲು ಅನುಕೂಲವಾಗುತ್ತದ ಅಲ್ಲಿ ಒಹಳ ಶೋಚನೀಯ ಪರಿಸ್ಥಿತಿ ಇದೆ ಅದರ ಬಗ್ಗೆ ತಾವು ಗಮನಹರಿಸಬೇಕಾಗಿ ನನ್ನ ವಿನಂತಿ

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಅಧ್ಯಕ್ಷರೆ ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಸೆವರೇಟ್ ನೋಟೀಸ್ ಬೇಕಾಗುತ್ತದೆ ಅವೆಲ್ಲವನ್ನೂ ನಾನು ಮಾರ್ಕ್ ಮಾಡಿಕೊಂಡಿದ್ದೇನೆ ಅವರಿಗೆ ಮಾಹಿತಿಯನ್ನು ಒದಗಿಸಿಕೊಡುವ ಪ್ರಯತ್ನ ಮಾಡುತ್ತೇನೆ ಅವರ ಕಳಕಳಿ ಏನು ಎಂಬುದು ನನಗ ಅರ್ಥವಾಗಿದೆ

ಶ್ರೀ ಚಂದ್ರಕಾಂತ್ ಬೆಲ್ಲದ್ ಮಾನ್ಯ ಅಧ್ಯಕ್ಷರೆ, ಮೆಗಾಸಿಟಿ ಪ್ರಶ್ನೆ ಇಲ್ಲಿ ಬಾರದಿದ್ದರೂ ಹುಬ್ಬಳ್ಳಿ-ಧಾರವಾಡ ನಗರದ ದೃಷ್ಟಿಯಿಂದ, ಬೆಂಗಳೂರಿನ ನಂತರ ಎರಡನೇ ಮಹಾ ನಗರ ಕರ್ನಾಟಕದಲ್ಲಿ ಹುಬ್ಬಳ್ಳಿ-ಧಾರವಾಡವಾಗಿದ್ದು ಇವತ್ತಿಗೂ ಅದರ ಬಗ್ಗೆ ಏಕೆ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ? ಮೂಲಭೂತ ಸೌಲಭ್ಯವಾದ ಕುಡಿಯುವ ನೀರಿನ ಪ್ರಶ್ನೆಯೇ ಮುಖ್ಯವಾಗಿದೆ ಅನೇಕ ಯೋಜನೆಗಳ ಮೂಲಕ ನಗರದ ಅಭಿವೃದ್ಧಿಯನ್ನು ಮಾಡಬೇಕಾಗುತ್ತದೆ ತಮಗೆ ಬೆಂಗಳೂರು ಒಂದೇ ಕಾಣುತ್ತಿದೆಯೇ ಹೇಗೆ? ಮೈಸೂರು ಒಂದೇ ಕಾಣಿಸುತ್ತಿದೆಯೇ ಹೇಗೆ? ಇವತ್ತು ಹುಬ್ಬಳ್ಳಿ-ಧಾರವಾಡ ನಗರಗಳನ್ನು ರಾಜ್ಯದಲ್ಲಿ ಪ್ರಮುಖವಾದ ಎರಡನೇ ಮಹಾನಗರ ಎಂದು ಏನು ಹೇಳುತ್ತಿದ್ದೇವೆ ಅಲ್ಲಿ ಮೂಲಭೂತ ಸೌಲಭ್ಯಗಳು ಎಂದು ಏನು ಇರಬೇಕು ಅವು ಇಲ್ಲದೇ ಬಹಳ ಚಿಂತಾಜನಕವಾದ ಪರಿಸ್ಥಿತಿ ಉಂಟಾಗಿದ ಇದ್ದರಿಂದ ಸರ್ಕಾರ ದಯವಿಟ್ಟು ಆ ಕಡೆ ಲಕ್ಷ್ಯ ಕೊಡಬೇಕು ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಅಧ್ಯಕ್ಷರೇ, ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎನ್ನುವುದರಲ್ಲಿ ಯಾರಿಗೂ ಎರಡಾಭಿಪ್ರಾಯ ಇಲ್ಲವೇ ಇಲ್ಲ ಅದೂ ಹುಬ್ಬಳ್ಳಿ ಧಾರವಾಡದಂತಹ ಮಹಾನಗರಕ್ಕೆ ಬೇಕಾಗಿರತಕ್ಕಂಥ ಕುಡಿಯುವ ನೀರು ಮತ್ತೊಂದು ವಿಚಾರಗಳನ್ನು ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದು ನನ್ನ ಇಲಾಖೆಗೆ ಬಾರದೆ ಇರುವುದರಿಂದ ನಾನು ಅವರಿಗೆ ಉತ್ತರ ಒದಗಿಸುವುದು ಕಷ್ಟ ಆದ್ದರಿಂದ ತಾವು ಅಭಿವ್ಯಕ್ತ ಮಾಡಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುತ್ತೇನೆ

ಸೋಮವಾರಪೇಟೆ ನಗರಕ್ಕೆ ಕುಡಿಯುವ ನೀರಿನ ಸರಬರಾಜು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 6(491)

ಸದಸ್ಯರ ಹೆಸರು ಶ್ರೀ ಅಪ್ಪಚ್ಚು ರಂಜನ್ ಎಂ ಪಿ (ಸೋಮವಾರಪೇಟೆ)

ಉತ್ತರಿಸುವವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಯವರು)

ಪ್ರಶ್ನೆ

1 ಕೊಡಗು ಜಿಲ್ಲೆ ಸೋಮವಾರಪೇಟೆ ನಗರಕ್ಕೆ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದ ಗಮನಕ್ಕೆ ಒಂದಿದೆಯೇ?

2 ಹಾರಂಗಿ ಹೂಳೆಯಿಂದ ಸೋಮವಾರಪೇಟೆ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ? (ವಿವರ ನೀಡುವುದು)

ಉತ್ತರ

1 ಬಂದಿದೆ

2 ಯೋಜನಾ ಸಾಧ್ಯತಾ ವರದಿ ತಯಾರಿಸಲಾಗಿದೆ ಈ ಯೋಜನೆಯ ಅಂದಾಜು ವೆಚ್ಚವು ರೂ 532 00 ಲಕ್ಷಗಳು ಸದರಿ ಯೋಜನೆಯಲ್ಲಿ 4 ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಅವಕಾಶವಿದೆ ಇದರಂತೆ ಇದರ ಪ್ರೊರೇಟಾ ವೆಚ್ಚವು ರೂ 354 66 ಲಕ್ಷಗಳು ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ಶ್ರೀ ಎಂ ಪಿ ಅಪ್ಪಚ್ಚುರಂಜನ್ ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ ಕಳೆದ 5 ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಾ ಬಂದಿದ್ದೇನೆ ಆದರೆ ಸರ್ಕಾರದ ಉತ್ತರದಲ್ಲಿ ಸರ್ಕಾರ ತೀವ್ರ ಪರಿಶೀಲನೆಯಲ್ಲಿದೆ ಎಂದು ''ತೀವ್ರ'' ಎನ್ನುವ ಪದವನ್ನು ಈ ಸಲ ಸೇರಿಸಿದ್ದಾರೆ ಅದು ಬಿಟ್ಟು ಯಾವುದೇ ಭರವಸೆ ಆಗಲಿ ನಾವು ಈ ಸಾರಿ ಮಾಡುತ್ತೇವೆ, ಈ ಸಲದ ಅಂದಾಜು ಪಟ್ಟಿಯಲ್ಲಿ ಸೇರಿಸುತ್ತೇವೆ ಎನ್ನುವ ಉತ್ತರ ಇಲ್ಲ ಕಾವೇರಿ ಮತ್ತು ಹಾರಂಗಿ ನದಿಯಿಂದ ಕುಡಿಯುವ ನೀರು ಕೊಡುತ್ತಿದ್ದೇವೆ ಇದರ ಜೊತೆಗೆ ರೈತರಿಗೆ ಸುಮಾರು 14 ಸಾವಿರ ಹೆಕ್ಟೇರ್‌ಗೆ ಜಮೀನಿಗೆ ನೀರು ಕೊಡುತ್ತಿದ್ದೇವೆ ಆದರೆ ನಮ್ಮ ಸೋಮವಾರಪೇಟೆಯಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಬಹಳ ಶೋಚನೀಯವಾದ ಪರಿಸ್ಥಿತಿ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಸಲದ ಬಜೆಟ್‌ನಲ್ಲಿ ಈ ಪ್ರಸ್ತಾವವನ್ನು ಸೇರಿಸಿ ಕುಡಿಯುವ ನೀರಿನ ಹಾಹಾಕಾರವನ್ನು ನೀಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಎಸ್ ಎಂ ಕೃಷ್ಣ ಮಾನ್ಯ ಅಧ್ಯಕ್ಷರೇ, ಇಲ್ಲಿನ ಸಮಸ್ಯೆ ಕೂಡ ನಾನು ಚಾಮರಾಜನಗರದ ಕುಡಿಯುವ ನೀರಿನ ವ್ಯವಸ್ಥೆಗೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ನಗರಾಭಿವೃದ್ಧಿ ಇಲಾಖೆ ಮತ್ತು ಆರ್‌ಡಿಪಿಆರ್ ಇಲಾಖೆ ಇವರುಗಳಲ್ಲಿ ಒಂದು ರೀತಿಯ ಸಮನ್ವಯ ಅಭಾವದ ಕಾರಣ ಪತ್ರ ವ್ಯವಹಾರದ ಮೂಲಕ ಇಂತಹ ಅಗತ್ಯವಾಗಿರತಕ್ಕಂಥ ಕುಡಿಯುವ ನೀರಿನ ಸರಬರಾಜಿನ ಯೋಜನೆಗಳು ನಿಧಾನವಾಗುತ್ತಾ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ ಆದ್ದರಿಂದ ಡೆವಲಪ್‌ಮೆಂಟ್ ಕಮೀಷನರ್ ಅನ್ನು ಮೇಲ್ವಿಚಾರಕರನ್ನಾಗಿ ಮಾಡಿ ಈ ಆರ್ ಡಿ ಪಿ ಆರ್ ಮತ್ತು ಅರ್ಬನ್ ವಾಟರ್ ಬೋರ್ಡ್ ಈ ಎರಡೂ ಇಲಾಖೆಗಳಲ್ಲಿ ನಾವು ಸಮನ್ವಯವನ್ನು ತರುವುದರ ಮೂಲಕ ಇಂತಹ ಯೋಜನೆಗಳು ಶೀಘ್ರವಾಗಿ ಕಾರ್ಯರೂಪಕ್ಕೆ ಬರಬೇಕಾದಂತಹ ಔಚಿತ್ಯವನ್ನು ನಾವು ಮನಗಂಡಿದ್ದೇವೆ, ಇಲ್ಲಿ ನಾಲ್ಕು ಹಳ್ಳಿಗಳು ಒಂದಿವೆ ಸೋಮವಾರವೇಟೆಗೆ ನಾವು ಹಾರಂಗಿಯಿಂದ ಏನು ನೀರು ತರಬೇಕೆಂದು ತೀರ್ಮಾನ ಮಾಡಿದ್ದೇವೆ ಆ ನೀರು ಸೋಮವಾರವೇಟೆಗೆ ಬರತಕ್ಕಂಥ ಕಾಲದಲ್ಲಿ ನಾಲ್ಕು ಹಳ್ಳಿಗಳು ಏನು ಇವ ಅವರಿಗೂ ನೀರು ಕೊಡಬೇಕು ಎನ್ನತಕ್ಕಂಥಾದ್ದು ಈ ಯೋಜನೆಯ ಪೂರ್ಣ ವಿವರ, ಈ ಯೋಜನೆಯ ವಿನ್ಯಾಸವನ್ನು ತಯಾರು ಮಾಡಿದ್ದೇವೆ ನಾನು ಡೆವಲಪ್‌ಮೆಂಟ್ ಕಮೀಷನರ್‌ಗೆ ಹೇಳಿ ಆದಷ್ಟು ಬೇಗ ಈ ಹೊಂದಾಣಿಕೆ ಸಾಧಿಸಿ ಸೋಮವಾರವೇಟೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಚಾಲ್ತಿಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಎಂ ಪಿ ಅವ್ವಚ್ಚುರಂಜನ್ ಮಾನ್ಯ ಅಧ್ಯಕ್ಷರೇ ಈ ಸಲದ ಬಜೆಟ್‌ನಲ್ಲಿ ನೇರಿಸಿದರೆ ಬಹಳ ಉತ್ತಮವಾಗುತ್ತಿತ್ತು ನಾವು ಇಡೀ ಬೆಂಗಳೂರಿಗೆ ಕುಡಿಯುವ ನೀರನ್ನು ಕೊಡಗಿನಿಂದ ಕೊಡುತ್ತಿದ್ದೇವೆ

ಶ್ರೀ ಎಸ್ ಎಂ ಕೃಷ್ಣ ಮಾನ್ಯ ಅಧ್ಯಕ್ಷರೇ, ಇವೆಲ್ಲಾ ಬಜೆಟ್‌ನಲ್ಲಿ ಬರುವುದಿಲ್ಲ ಏಕೆಂದರೆ ಇವು ಅರ್ಬನ್ ಡೆವಲಪ್‌ಮೆಂಟ್ ವಾಟರ್ ಬೋರ್ಡ್ ಮೂಲಕ ಮಾಡತಕ್ಕಂಥ ಯೋಜನೆಗಳಾದುದರಿಂದ ಬಜೆಟ್‌ಗೆ ಬಾರದಿದ್ದರೂ ಕೂಡ ಸೋಮವಾರವೇಟೆಗೆ ನೀರು ಕೊಡತಕ್ಕಂಥ ನಮ್ಮ ಉದ್ದೇಶ ಏನು ಇದೆ ಆ ಉದ್ದೇಶವನ್ನು ಈಡೇರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ

ಶ್ರೀ ಎಂ ಪಿ ಅವ್ವಚ್ಚುರಂಜನ್ ಮಾನ್ಯ ಅಧ್ಯಕ್ಷರೇ ಈ ವರ್ಷವೇ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನ

ಬಜಾವುರ ಜಿಲ್ಲೆಯಲ್ಲಿ ಜಲಸಂವರ್ಧನ ಯೋಜನೆ